ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು
ಕನ್ನಡ ವಿಭಾಗ ಮತ್ತು ಐ.ಕ್ಯೂ.ಎ.ಸಿ., ಎಸ್. ಜೆ. ಎಂ. ಮಹಿಳಾ ಮಹಾವಿದ್ಯಾಲಯ, ಚಿತ್ರದುರ್ಗ

# ಕನಕ ಓದು

(ಎರಡು ದಿನಗಳ ಶಿಬಿರ)

**2018ರ ಫೆಬ್ರುವರಿ 16 ಮತ್ತು 17** | **ಸಮಯ : ಬೆಳಗ್ಗೆ 10.30**

**ಸ್ಥಳ : ಎಸ್. ಜೆ. ಎಂ. ಮಹಿಳಾ ಮಹಾವಿದ್ಯಾಲಯದ ಸಭಾಂಗಣ, ಚಿತ್ರದುರ್ಗ**

ಉದ್ಘಾಟನೆ
**ಡಾ|| ಈ. ಚಿತ್ರಶೇಖರ**
ಕಾರ್ಯನಿರ್ವಾಹಕ ನಿರ್ದೇಶಕರು
ಎಸ್.ಜೆ.ಎಂ. ವಿದ್ಯಾಪೀಠ, ಚಿತ್ರದುರ್ಗ

ಅಧ್ಯಕ್ಷತೆ
**ಪ್ರೊ. ಸಿ. ಬಸವರಾಜಪ್ಪ**
ಪ್ರಾಂಶುಪಾಲರು
ಎಸ್.ಜೆ.ಎಂ. ಮಹಿಳಾ ಮಹಾವಿದ್ಯಾಲಯ, ಚಿತ್ರದುರ್ಗ

ಉಪಸ್ಥಿತಿ
**ಕಾ ತ ಚಿಕ್ಕಣ್ಣ**
ಸಮನ್ವಯಾಧಿಕಾರಿಗಳು
ರಾ.ಸಂ.ಕ.ಅ ಮತ್ತು ಸಂ.ಕೇಂದ್ರ, ಬೆಂಗಳೂರು

ಶಿಬಿರದ ನಿರ್ದೇಶಕರು
**ಡಾ. ರಂಗನಾಥ ಕಂಟನಕುಂಟೆ**

## ತಮಗೆ ಆದರದ ಸ್ವಾಗತ

**ಡಾ. ಸಿ. ಟಿ. ಜಯಣ್ಣ**
ಶಿಬಿರ ಸಂಚಾಲಕರು

**ಕೆ ಎಚ್ ಚನ್ನೂರ**
ಸದಸ್ಯ ಕಾರ್ಯದರ್ಶಿಗಳು
ರಾ.ಸಂ.ಕ.ಅ ಮತ್ತು ಸಂ.ಕೇಂದ್ರ ಹಾಗೂ
ಜಂಟಿ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

Scanned with CamScanner

Time 10.3 a
CB S[illegible]

Date: 16th and 17th Feb, 2018

Sub: 'Kanaka Study' (Two days workshop)

| | | |
|---|---|---|
| In association with | : | S J M Arts College for Women, Dept. of Kannada, National saint peet kanakadasa study and research centre Bangalore |
| Inauguration | : | Dr. E. Chitrashekhar |
| Presence | : | K.T. Chikkanna<br>Dr Ranganatha, Kankanakunte |
| President | : | Prof. C. Basavarajappa<br>150 students of different colleges have participated in this programme |

PRINCIPAL
S.J.M. Arts College for women
CHITRADURGA - 577 501
Karnataka.

Scanned with CamScanner

SJM Arts College For Women, Chitradurga, Dept Of Kannada,National Saint Peet Kanakadasa study and Research centre Bangalore organised Two Day Workshop on 16th 17th Feb 2018 Dr E Chitrashekar Executive Director Inaugural the work shop Ka.Ta Chikkanna Prof C Basavarajappa Prof.N Chaluvaraj,Dr Jayanna C T are in this programme

'ಕನಕ ಓದು' ಶಿಬಿರದ ಉದ್ಘಾಟನೆಯಲ್ಲಿ ಕಾ.ತ.ಚಿಕ್ಕಣ್ಣ

# ಕಾವ್ಯದಿಂದ ಜ್ಞಾನ ಪಸರಿಸಿದ ಕನಕದಾಸ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** ಕಾವ್ಯಗಳ ಮೂಲಕವೇ ಸಮಾಜಕ್ಕೆ ಉತ್ತಮ ಸಂದೇಶ ಸಾರಿದ ಕನಕದಾಸರು, ಜ್ಞಾನ ಎಂಬುದು ಯಾರ ಸೊತ್ತು ಅಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ ಎಂದು ಸಂತ ಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಮನ್ವಯಾಧಿಕಾರಿ ಕಾ.ತ. ಚಿಕ್ಕಣ್ಣ ಹೇಳಿದರು.

ನಗರದ ಎಸ್‌ಜೆಎಂ ಮಹಿಳಾ ಮಹಾವಿದ್ಯಾಲಯದಲ್ಲಿ ಬೆಂಗಳೂರಿನ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಮತ್ತು ಕನ್ನಡ ವಿಭಾಗ, ಎಸ್‌ಜೆಎಂ ಮಹಿಳಾ ಮಹಾವಿದ್ಯಾಲಯ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ 'ಕನಕ ಓದು' ಎರಡು ದಿನಗಳ ಶಿಬಿರದಲ್ಲಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು.

ಕನದಾಸರು ಜಾತಿ ವ್ಯವಸ್ಥೆಯನ್ನು ಖಂಡಿಸಿದರು. ತನ್ನ ಕಾವ್ಯಗಳ ಮೂಲಕವೇ 'ಕುಲ ಕುಲವೆಂದು ಹೊಡೆದಾಡದಿರಿ' ಎಂದು ಕಿವಿಮಾತು ಹೇಳಿದರು. ಆದರೆ, ಲೋಹಿಯಾ ಹೇಳಿದಂತೆ, ದೇಶದಿಂದ ಜಾತಿ ವ್ಯವಸ್ಥೆ ತೆಗೆದು ಹಾಕುವುದು ಅಷ್ಟು ಸುಲಭವದ ಕೆಲಸವಲ್ಲ ಎಂದು ವಿಶ್ಲೇಷಿಸಿದರು.

'ನಮಗೆ ಬೇಕಾಗಿರುವುದು ಭಾಷೆ ಮತ್ತು ಸಂಸ್ಕೃತಿಯ ಮೂಲಕ ಕಟ್ಟುವ ಚರಿತ್ರೆ. ಕನಕದಾಸರು ಚರಿತ್ರೆಹೀನರಿಗೆ ಚರಿತ್ರೆಯನ್ನು ಸಾಂಸ್ಕೃತಿಕವಾಗಿ ತಿಳಿಸಿದರು. ಹಾಗಾಗಿ ಕನಕ ನಮಗೆ ಈಗಲೂ ಪ್ರಸ್ತುತ ಹಾಗೂ ಮುಖ್ಯವಾಗುತ್ತಾರೆ' ಎಂದರು.

ಬದುಕಿನಾಚೆಗೂ ಯೋಚಿಸಬೇಕು ಎನ್ನುವುದು ಕನಕರ ಕಾವ್ಯದಲ್ಲಿ ವ್ಯಕ್ತವಾಗಿದೆ. ಕನಕದಾಸರ ಕಾವ್ಯಗಳಲ್ಲಿ ಅನುಭಾವದಹೂರಣವಿರುವುದರಿಂದ, ಬದುಕಿಗೆ ಅವರ ಕಾವ್ಯಗಳು ಉತ್ತೇಜನ ನೀಡುತ್ತವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಎಸ್‌ಜೆಎಂ. ವಿದ್ಯಾಪೀಠದ ಕಾರ್ಯನಿರ್ವಹಣಾ ನಿರ್ದೇಶಕ ಡಾ. ಈ. ಚಿತ್ರಶೇಖರ್, 'ಬೇರೆ ಬೇರೆ ರಾಷ್ಟ್ರಗಳಲ್ಲಿ ಅವರದೇ ಆದ ಧರ್ಮಗಳಿವೆ. ಆದರೆ 7 ಪ್ರಮುಖ ಧರ್ಮಗಳನ್ನು ಹೊಂದಿರುವ ಶ್ರೇಷ್ಠ ನಾಡಿನಲ್ಲಿ ನಾವಿದ್ದೇವೆ' ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಸಿ. ಬಸವರಾಜಪ್ಪ ಮಾತನಾಡಿ, ವಿದ್ಯಾರ್ಥಿಗಳು ಕುತೂಹಲದಿಂದ ಪಠ್ಯದ ಜತೆ ಕನಕದಾಸರಂಥ ದಾರ್ಶನಿಕರ ಕೃತಿಗಳ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇಂಥ ಕಾರ್ಯಕ್ರಮಗಳು, ವಿದ್ಯಾರ್ಥಿಗಳಲ್ಲಿ ಹೊಸ ಚಿಂತನೆಗಳನ್ನು ಹುಟ್ಟು ಹಾಕುತ್ತವೆ. ಹೆಚ್ಚಿನ ಮಾಹಿತಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಕಾಲೇಜು, ಓದು ಎಂದರೆ, ಅದು ಕೇವಲ ಅಂಕಪಟ್ಟಿಗೆ ಸೀಮಿತವಾಗಬಾರದು. ಅದೇ ಪ್ರಾಮುಖ್ಯವಾಗಬಾರದು. ಅದರಾಚೆಗಿನ ಬದುಕಿನ ಬಗ್ಗೆಯೂ ಚಿಂತಿಸಬೇಕು ಎಂದರು.

ಡಾ. ರಂಗನಾಥ್ ಕಂಟನಕುಂಟೆ, ಪ್ರೊ. ಚಲುವರಾಜು ವೇದಿಕೆಯಲ್ಲಿದ್ದರು. ಡಾ. ಸಿ.ಟಿ. ಜಯಣ್ಣ ಸ್ವಾಗತಿಸಿದರು. ನಾಗಶ್ರೀ ಪ್ರಾರ್ಥಿಸಿದರು. ಮೀರಾ ಯಾದವ್ ನಿರೂಪಿಸಿದರು. ಪ್ರೊ. ಚಲುವರಾಜ್ ವಂದಿಸಿದರು.




ಚಿತ್ರದುರ್ಗದ ಎಸ್ ಜೆ ಎಂ ಮಹಿಳಾ ಕಾಲೇಜಿನಲ್ಲಿ ಶುಕ್ರವಾರದಿಂದ ಆರಂಭವಾದ ಎರಡು ದಿನಗಳ 'ಕನಕ ಓದು' ಶಿಬಿರವನ್ನು ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಮನ್ವಯಾಧಿಕಾರಿ ಕಾ.ತ. ಚಿಕ್ಕಣ್ಣ ಉದ್ಘಾಟಿಸಿದರು.

**ಮುಖ್ಯಾಂಶಗಳು**

- ಎರಡು ದಿನಗಳ ಶಿಬಿರ ಆಯೋಜನೆ
- ವಿದ್ಯಾರ್ಥಿಗಳಿಗೆ ಕನಕದಾಸರ ಕೃತಿಗಳ ಪರಿಚಯ
- ಕನಕದಾಸ ಅಧ್ಯಯನ, ಸಂಶೋಧನಾ ಕೇಂದ್ರದ ಆಯೋಜನೆ

Kanthakadas, who conveyed the message to the society through poetry, has proven that knowledge is not a property of anyone, said Ka ta Chikkanna, Co ordinator of Santakavi Kanakadasa Study and Research Center,

.

Kanakadas denounced the caste system and said that it was not an easy task to remove the caste system from the country'

Prajavani Kannada Daily News Paper on 17- 02- 2018

Scanned with CamSca